| | | |
|---|---|---|
| 7 | ಶಿಡ್ಲಘಟ್ಟ | 8.69 |
| 8 | ಚಿಕ್ಕಬಳ್ಳಾಪುರ | 2.01 |
| 9 | ಗೌರಿಬಿದನೂರು | 1.50 |
| 10 | ಬಾಗೇಪಲ್ಲಿ | 1.25 |
| 11 | ಗುಡಿಬಂಡೆ | 0.75 |
| | ಒಟ್ಟು | 26.70 |

860(1368) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಒತ್ತುವರಿ ಮಾಡಿರುವ ಅರಣ್ಯ ಭೂಮಿ ಎಷ್ಟು; (ಕೇಂದ್ರ ಮತ್ತು ರಾಜ್ಯ ಮೀಸಲು ಅರಣ್ಯ ಪ್ರದೇಶವನ್ನು ವಿಂಗಡಿಸಿ ಪ್ರತ್ಯೇಕವಾಗಿ ವಿವರ ನೀಡುವುದು)

ಆ) 1985ರಲ್ಲಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ನೀಡಿರುವ "ಸಿ" ಮತ್ತು "ಡಿ" ವರ್ಗದ ಭೂಮಿ ಎಷ್ಟು ;

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜ್ಯದಲ್ಲಿಯ ಅರಣ್ಯ ಒತ್ತುವರಿ ಪ್ರದೇಶವು 65585.65 ಹೆ. ಅರಣ್ಯ ಕಾಯ್ದೆ 1963ರ ನಿಯಮ 23 ರನ್ವಯ ರಾಜ್ಯ ಅರಣ್ಯವನ್ನು ರಕ್ಷಿತ ಅರಣ್ಯವೆಂದು ಘೋಷಿಸಿಲಾಗಿದೆ. ಕೇಂದ್ರ ಹಾಗೂ ರಾಜ್ಯ ಮೀಸಲು ಅರಣ್ಯ ಪ್ರದೇಶಗಳು ಎಂದು ಇರುವುದಿಲ್ಲ.

ಆ) 3.01.1991ರ ಪೂರ್ವದಲ್ಲಿ 18 ಲಕ್ಷ ಎಕರೆ ಸಿ ಮತ್ತು ಡಿ ವರ್ಗದ ಭೂಮಿಯನ್ನು ಕಂದಾಯ ಇಲಾಖೆಯಿಂದ ನೀಡಲಾಗಿತ್ತು. ಆಸಂ: ಆರ್‌ಡಿ 106 ಎಲ್‌ಜಿ 88 ದಿನಾಂಕ: 03.01.1991ರ ಪ್ರಕಾರ 16,32,500 ಎಕರೆ ಭೂಮಿಯನ್ನು ಮರಳಿ ಕಂದಾಯ ಇಲಾಖೆಯು ಹಿಂದಕ್ಕೆ ತೆಗೆದುಕೊಂಡಿತ್ತು. ಆಸಂ: ಆರ್‌ಡಿ 106 ಎಲ್‌ಜಿ 88 ದಿನಾಂಕ 07.06.1993 ರಂತೆ ಎಲ್‌ಜಿ 88 ದಿನಾಂಕ 07.06.1993 ರಂತೆ 2.58 ಲಕ್ಷ ಎಕರೆ ಭೂಮಿಯನ್ನು ಕಂದಾಯ ಇಲಾಖೆಯಿಂದ ಲ್ಯಾಂಡ್ ಬ್ಯಾಂಕಿಗೆ ಹಸ್ತಾಂತರಿಸಲು ಆದೇಶಿಸಲಾಗಿತ್ತು. ದಿನಾಂಕ: 17.10.1995 ವರೆಗಿನ ಆದೇಶಗಳ ಪ್ರಕಾರ 1,76,401.85 ಹೆಕ್ಟೇರ್ ಜಮೀನನ್ನು ಅರಣ್ಯ ಇಲಾಖೆಗೆ ಕಂದಾಯ ಇಲಾಖೆಯಿಂದ ವರ್ಗಾಯಿಸಲಾಗಿದೆ.

863(1042) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2007–08ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಹೊಸ ಮದ್ಯದ ಅಂಗಡಿಗಳಿಗೆ: ಬಾರ್‌ಗಳಿಗ ಅನುಮತಿ ನೀಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)